**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 5479/2023**

**ಚಾಸಾ - 04 / ಪ್ರಾಸಾ - 06**

| | |
|---|---|
| ಹೆಸರು | **ಶ್ರೀಧರ್** |
| ತಂದೆ ಹೆಸರು | ಆಂಜನಪ್ಪ |
| ವಯಸ್ಸು | 51 |
| ಉದ್ಯೋಗ | ಶಾಲಾ ಕಾರ್ಯದರ್ಶಿ |
| ವಿಳಾಸ | ತಾವರೆಕೆರೆ |

**ದಿನಾಂಕಃ 23.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಈಗ ಸಾಕ್ಷಿಗೆ ನಿಪಿ-10 ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-10(ಸಿ) ಎಂದು ಗುರುತಿಸಲಾಯಿತು. ನನಗೆ ಬಸ್ಸಿಗೆ ಅಪಘಾತವಾಗಿದೆ ಎಂದು ಹೇಳಿ ಕರೆ ಮಾಡಿ ತಿಳಿಸಿದರು ಮತ್ತು ನಾನು ಆ ವಿಷಯವಾಗಿ ಠಾಣೆಗೆ ಹೋದಾಗ ಪೋಲಿಸರು ನನ್ನಿಂದ ನಿಪಿ-10 ಕ್ಕೆ ಸಹಿಯನ್ನು ಪಡೆದುಕೊಂಡರು. ನನ್ನನ್ನು ಹೊರತು ಪಡಿಸಿ ನಿಪಿ-10 ಕ್ಕೆ ಯಾರು ಸಹಿಯನ್ನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ನಿಪಿ-3 ಮತ್ತು 4 ಅನ್ನು ತೋರಿಸಿದ್ದು , ಅದರಲ್ಲಿರುವ ಬಸ್ ? ಅನ್ನು ನಾನು ಠಾಣೆಗೆ ಹಾಜರು ಪಡಿಸಿರುತ್ತೇನೆ. ಈಗ ಸಾಕ್ಷಿಗೆ ಇಂಡಿಮಿನಿಟಿ ಬಾಂಡ್ ?ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಇಂಡಿಮಿನಿಟಿ ಬಾಂಡ್ ಅನ್ನು ನಿಪಿ-11 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿನಾಂಕ 08.06.2023 ರಂದು ಪೋಲಿಸರು ನಿಮ್ಮ ಶಾಲೆಗೆ ಸೇರಿರುವ ವಾಹನವನ್ನು ಅಮಾನತು ಪಡಿಸಿಕೊಳ್ಳಬೇಕು ಎಂದು ನಿಮಗೆ ತಿಳಿಸಿದರು ಮತ್ತು ಅದೇ ರೀತಿ ನೀವು ಸದರಿ ವಾಹನವನ್ನು ಠಾಣೆಗೆ ಹಾಜರು ಪಡಿರುತ್ತೀರ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಿನಾಂಕ 07.06.2023 ರಂದು ಮಧ್ಯಾಹ್ನ 3.45 ರ ಸಮಯದಲ್ಲಿ ಪ್ರಾಸಾ 1 ರವರ ಮಗಳಾದ ಲಿಶ್ಮಿತಾ ರವರು ನಿಮ್ಮ ಶಾಲೆಗೆ ಸೇರಿದ ವಾಹನವಾದ ಕೆಎ-43-5807 ರ ಶಾಲಾ ವಾಹನದಲ್ಲಿ ಮನೆಯ ಬಳಿ ಬಂದು ಇಳಿದ ಸಮಯದಲ್ಲಿ ಸದರಿ ಬಸ್ಸಿನ ಚಾಲಕ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ರಸ್ತೆ ದಾಟುತ್ತಿದ್ದ ಲಿಶ್ಮಿತಾಳ ಮೇಲೆ ವಾಹನವನ್ನು ಹತ್ತಿಸಿದ ಪರಿಣಾಮ ಲಿಶ್ಮಿತ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಿನಾಂಕ 08.06.2023 ರಂದು ಸಂಜೆ 4.00 ರಿಂದ 4.45 ರ ಸಮಯದಲ್ಲಿ ಪೋಲಿಸರು ನಿಪಿ-10 ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ , ಪ್ರಾಸಾ 4 ಮತ್ತು 5 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಿನಾಂಕ 14.06.2023 ರಂದು ಸದರಿ ವಾಹನವನ್ನು ನೀವು ನಿಪಿ-11 ರಂತೆ ಇಂಡಿಮಿನಿಟಿ ಬಾಂಡ್ ? ನೀಡಿ ಠಾಣೆಯಿಂದ ಬಿಡಿಸಿಕೊಂಡಿರುತ್ತೀರ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ನಿಪಿ-3 ಮತ್ತು 4 ಅನ್ನು ತೋರಿಸಿದ್ದು , ಸದರಿ ಪೋಟೋವನ್ನು ನಿಮಗೆ ವಾಹನ ಬಿಡುಗಡೆ ಮಾಡುವ ಸಮಯದಲ್ಲಿ ತೆಗೆಯಲಾಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ. ಆರ್ ಎಸ್ , ವಕೀಲರಿಂದಃ-**

? ನಾನು ಕಳೆದ 10 ವರ್ಷಗಳಿಂದ ಎಂ ಇ ಎಸ್ ? ಶಾಲೆಯಲ್ಲಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಶಾಲೆಯಲ್ಲಿ ಒಟ್ಟು 4 ಶಾಲಾ ವಾಹನಗಳು ಇವೆ. ಸದರಿ 4 ವಾಹನಗಳಲ್ಲಿ ಈ ಪ್ರಕರಣದಲ್ಲಿ ಅಪಘಾತಕ್ಕೆ ಒಳಗಾಗಿರುವ ವಾಹನವು ಒಂದಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಶಾಲಾ ವಾಹನಗಳಿಗೆ ಆಯಾಗಳನ್ನು ನೇಮಕ ಮಾಡುವ ನಿಯಮ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪುಟ್ಟ ಮಕ್ಕಳಿಗೆ ಪ್ರಪಂಚದ ಜ್ಞಾನ ಇಲ್ಲದೇ ಇರುವ ಕಾರಣ ಆಯಾಗಳನ್ನು ನೇಮಿಸಿ ಶಾಲಾ ವಾಹನದಿಂದ ಮಕ್ಕಳನ್ನು ಇಳಿಸುವ ಮತ್ತು ಹತ್ತುವ ಕೆಲಸವನ್ನು ಆಯಾಗಳೆ ಮಾಡುತ್ತಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ನೀವು ಠಾಣೆಗೆ ವಾಹನವನ್ನು ಬಿಡಿಸಿಕೊಳ್ಳಲು ಹೋದ ಸಮಯದಲ್ಲಿ ಸದರಿ ವಾಹನಕ್ಕೆ ಯಾರನ್ನು ಆಯಾ ಆಗಿ ನೇಮಿಸಿದ್ದರು ಎಂದು ನೀವು ಪೋಲಿಸರಿಗೆ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ಪೋಲಿಸರು ಕೇಳಲಿಲ್ಲ ಹಾಗಾಗಿ ತಾನು ಅದರ ಬಗ್ಗೆ ಹೇಳಿರುವುದಿಲ್ಲ ಎಂದು ಹೇಳುತ್ತಾರೆ. ಅಪಘಾತ ನಡೆದ ಸಮಯದಲ್ಲಿ ಸದರಿ ವಾಹನಕ್ಕೆ ಯಾವುದೇ ಆಯಾ ಇರಲಿಲ್ಲ. ಅಪಘಾತ ನಡೆದ ಸಮಯದಲ್ಲಿ ಶಾಲಾ ವಾಹನಕ್ಕೆ ಆಯಾ ಇದ್ದ ಪಕ್ಷದಲ್ಲಿ ಸದರಿ ಅಪಘಾತ ಸಂಭವಿಸುತ್ತಿರಲಿಲ್ಲ ಎಂದರೆ ಸಾಕ್ಷಿಯು ಸಂಭವ ಕಡಿಮೆ ಇತ್ತು ಎನ್ನುತ್ತಾರೆ. ಮಕ್ಕಳ ಜೀವವನ್ನು ರಕ್ಷಣೆ ಮಾಡುವ ಜವಾಬ್ದಾರಿಯು ನಿಮ್ಮ ಮೇಲೆ ಇದೆ ಮತ್ತು ನೀವು ಆಯಾ ಇಲ್ಲದೆ ಯಾವುದೇ ವಾಹನವನ್ನು ಮಕ್ಕಳನ್ನು ಶಾಲೆಗೆ ಕರೆತರಲು ಮತ್ತು ಬಿಡಲು ನೇಮಕ ಮಾಡುವಂತಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಅಪಘಾತಕ್ಕೆ ಶಾಲಾ ಆಡಳಿತ ಮಂಡಳಿಯೆ ಹೊಣೆಗಾರಿಕೆಯಾಗಿರುತ್ತಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಿಮ್ಮ ಶಾಲೆಯ ಬೇಜವಾಬ್ದಾರಿಯಿಂದ ಸದರಿ ಅಪಘಾತವು ಸಂಭವಿಸಿದರೂ ಸಹ

ನೀವು ಮೃತ ಮಗುವಿನ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನೀವು ಅಪಘಾತ ನಡೆದ ಸಮಯದಲ್ಲಿ ಸ್ಥಳದಲ್ಲಿ ಇಲ್ಲದ ಕಾರಣ ಅಪಘಾತವನ್ನು ಯಾರು ಮತ್ತು ಯಾವ ರೀತಿ ಮಾಡಿರುತ್ತಾರೆ ಎಂಬುದರ ಬಗ್ಗೆ ನಿಮಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ನಿಪಿ-10 ಮತ್ತು 11 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೀರ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 5479/2023**

**ಚಾಸಾ - 06 / ಪ್ರಾಸಾ - 05**

| | |
|---|---|
| ಹೆಸರು | **ಚರಣ್** |
| ತಂದೆ ಹೆಸರು | ಚಂದ್ರಪ್ಪ |
| ವಯಸ್ಸು | 27 |
| ಉದ್ಯೋಗ | ವ್ಯವಸಾಯ |
| ವಿಳಾಸ | ಗಂಗೇನಹಳ್ಳಿ , ತಾವರೆಕೆರೆ |

**ದಿನಾಂಕಃ 23.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಈಗ ಸಾಕ್ಷಿಗೆ ನಿಪಿ-9 ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-10 ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

ದಿನಾಂಕ 08.06.2023 ರಂದು ನಾನು ತಾವರೆಕೆರೆ ಪೋಲಿಸ್ ಠಾಣೆಗೆ ಹೋಗಿದ್ದಾಗ ಪೋಲಿಸರು ಮಗುವಿನ ಮೇಲೆ ಗಾಡಿಯ ಅಪಘಾತವಾಗಿರುವ ಕಾರಣದಿಂದ ನನಗೆ ಸಹಿಯನ್ನು ಮಾಡಲು ಹೇಳಿದ ಕಾರಣ ನಾನು ನಿಪಿ-9 ಮತ್ತು 10 ಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ. ನಾನು ಮತ್ತು ಪ್ರಾಸಾ-4 ರವರು ನಿಪಿ-9 ಮತ್ತು 10 ಕ್ಕೆ ಸಹಿಯನ್ನು ಮಾಡಿರುತ್ತೇವೆ. ನನ್ನಿಂದ ಸಹಿಯನ್ನು ಪಡೆದು ಪೋಲಿಸರು ನನಗೆ ವಾಹನವನ್ನು ತೋರಿಸಿ ಕಳುಹಿಸಿದರು. ಈಗ ಸಾಕ್ಷಿಗೆ ನಿಪಿ-3 ಮತ್ತು 4 ಅನ್ನು ತೋರಿಸಿದ್ದು , ಸದರಿ ವಾಹನವನ್ನು ನಾನು ಠಾಣೆಯಲ್ಲಿ ನೋಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖಿವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿನಾಂಕ 08.06.2023 ರಂದು ವಾಹನ ಅಮಾನತು ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪೋಲಿಸರು ನಿಮಗೆ ಮತ್ತು ಪ್ರಾಸಾ-4 ರವರಿಗೆ ನಿಪಿ-9 ರಂತೆ ನೋಟೀಸನ್ನು ನೀಡಿದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಬಸ್ ಅನ್ನು ಚಾಸಾ-4 ರವರು ಹಾಜರು ಪಡಿಸಿದ್ದು , ಅದೇ ದಿನದಂದು ಸಂಜೆ 4.00 ರಿಂದ 4.45 ರ ಸಮಯದಲ್ಲಿ ಪೋಲಿಸರು ನಿಪಿ-10 ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ, ಚಾಸಾ-4 ಮತ್ತು ಪ್ರಾಸಾ 4 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅಮಾನತು ಮಾಡಿದ ವಾಹನದ ಸಂಖ್ಯೆ ಕೆಎ 43-5807 ಆಗಿದೆ ಎಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ. ಎಂ.ಎಂ, ವಕೀಲರಿಂದಃ-**

ನನಗೆ ನಿಪಿ-10 ರಲ್ಲಿ ಇರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಪಿ-10 ಕ್ಕೆ ಸಹಕರಿಸುವಂತೆ ಹೇಳಿ ಪೋಲಿಸರು ನನಗೆ ನೋಟೀಸನ್ನು ನೀಡಿದರು. ನನ್ನನ್ನು ಹೊರತು ಪಡಿಸಿ ಪೋಲಿಸರು ಬೇರೆ ಯಾರಿಗೆ ನೋಟೀಸನ್ನು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-10 ಕ್ಕೆ ನಾನು, ಚಾಸಾ-4 ಮತ್ತು ಪ್ರಾಸಾ -4 ರವರು ಸಹಿಯನ್ನು ಮಾಡಿದ್ದಾರೆ. ನಿಪಿ-10 ರಂತೆ ಪಂಚನಾಮೆಯನ್ನು ಸಂಜೆ 4.30 ರಿಂದ 5.00 ಗಂಟೆಯ ಸಮಯದಲ್ಲಿ ಮಾಡಲಾಯಿತು. ನಿಪಿ-10 ಅನ್ನು ಮಾಡಿದ ಸ್ಥಳದ ಚೆಕ್ಕುಬಂಧಿ ನನಗೆ ಗೊತ್ತಿಲ್ಲ.

ನನಗೆ  ನಿಪಿ-10 ರಂತೆ ಅಮಾನತು ಮಾಡಿರುವ  ವಾಹನದ ಸಂಖ್ಯೆ ನೆನಪಿಲ್ಲ, ಆದರೆ  ಅದು ಶಾಲಾ ವಾಹನವಾಗಿರುತ್ತದೆ. ಶಾಲಾ ವಾಹನವು ಹಳದಿ ಬಣ್ಣದ ವಾಹನವಾಗಿರುತ್ತದೆ ಮತ್ತು  ಅದು ಯಾವ ಕಂಪನಿಯು ವಾಹನವಾಗಿದೆ ಎಂದು ನನಗೆ ಗೊತ್ತಿಲ್ಲ.  ಮೃತ ಮಗುವಿನ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ.  ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 5479/2023**

**ಚಾಸಾ - 05 / ಪ್ರಾಸಾ - 04**

| | |
|---|---|
| ಹೆಸರು | **ಮಂಜುನಾಥ** |
| ತಂದೆ ಹೆಸರು | ನಾರಾಯಣ |
| ವಯಸ್ಸು | 34 |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಹೊನ್ನಗನಹಟ್ಟಿ |

ದಿನಾಂಕಃ **23.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ **ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಈಗ ಸಾಕ್ಷಿಗೆ ನೋಟೀಸನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ನೋಟೀಸನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಅಮಾನತು ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಅಮಾನತು ಪಂಚನಾಮೆಯನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ದಿನಾಂಕ 08.06.2023 ರಂದು ನಾನು ತಾವರೆಕೆರೆ ಪೋಲಿಸ್ ಠಾಣೆಗೆ ಹೋಗಿದ್ದಾಗ ಪೋಲಿಸರು ಮಗುವಿನ ಮೇಲೆ ಗಾಡಿಯ ಅಪಘಾತವಾಗಿರುವ ಕಾರಣದಿಂದ ನನಗೆ ಸಹಿಯನ್ನು ಮಾಡಲು ಹೇಳಿದ ಕಾರಣ ನಾನು ನಿಪಿ-9 ಮತ್ತು 10 ಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ. ನಾನು ಮತ್ತು ಚಾಸಾ-6 ರವರು ನಿಪಿ-9 ಮತ್ತು 10 ಕ್ಕೆ ಸಹಿಯನ್ನು ಮಾಡಿರುತ್ತೇವೆ. ನನ್ನಿಂದ ಸಹಿಯನ್ನು ಪಡೆದು ಪೋಲಿಸರು ನನಗೆ ವಾಹನವನ್ನು ತೋರಿಸಿ ಕಳುಹಿಸಿದರು. ಈಗ ಸಾಕ್ಷಿಗೆ ನಿಪಿ-3 ಮತ್ತು 4 ಅನ್ನು ತೋರಿಸಿದ್ದು , ಸದರಿ ವಾಹನವನ್ನು ನಾನು ಠಾಣೆಯಲ್ಲಿ ನೋಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿನಾಂಕ 08.06.2023 ರಂದು ವಾಹನ ಅಮಾನತು ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪೋಲಿಸರು ನಿಮಗೆ ಮತ್ತು ಚಾಸಾ-6 ರವರಿಗೆ ನಿಪಿ-9 ರಂತೆ ನೋಟೀಸನ್ನು ನೀಡಿದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಬಸ್ ಅನ್ನು ಚಾಸಾ-4 ರವರು ಹಾಜರು ಪಡಿಸಿದ್ದು , ಅದೇ ದಿನದಂದು ಸಂಜೆ 4.00 ರಿಂದ 4.45 ರ ಸಮಯದಲ್ಲಿ ಪೋಲಿಸರು ನಿಪಿ-10 ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ , ಚಾಸಾ-4 ಮತ್ತು 6 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅಮಾನತು ಮಾಡಿದ ವಾಹನದ ಸಂಖ್ಯೆ ಕೆಎ 43-5807 ಆಗಿದೆ ಎಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ. ಎಂ.ಎಂ, ವಕೀಲರಿಂದಃ-**

ನನಗೆ ನಿಪಿ-10 ರಲ್ಲಿ ಇರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಪಿ-10 ಕ್ಕೆ ಸಹಕರಿಸುವಂತೆ ಹೇಳಿ ಪೋಲಿಸರು ನನಗೆ ನೋಟೀಸನ್ನು ನೀಡಿದರು. ನನ್ನನ್ನು ಹೊರತು ಪಡಿಸಿ ಪೋಲಿಸರು ಬೇರೆ ಯಾರಿಗೆ ನೋಟೀಸನ್ನು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-10 ಕ್ಕೆ ನಾನು, ಚಾಸಾ-4 ಮತ್ತು 6 ರವರು ಸಹಿಯನ್ನು ಮಾಡಿದ್ದಾರೆ. ನಿಪಿ-10 ರಂತೆ ಪಂಚನಾಮೆಯನ್ನು ಸಂಜೆ 4.30 ರಿಂದ 5.00 ಗಂಟೆಯ ಸಮಯದಲ್ಲಿ ಮಾಡಲಾಯಿತು. ನಿಪಿ-10 ಅನ್ನು ಮಾಡಿದ ಸ್ಥಳದ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ನನಗೆ ನಿಪಿ-10 ರಂತೆ ಅಮಾನತು ಮಾಡಿರುವ ವಾಹನದ ಸಂಖ್ಯೆ ನೆನಪಿಲ್ಲ, ಆದರೆ ಅದು ಶಾಲಾ ವಾಹನವಾಗಿರುತ್ತದೆ. ಶಾಲಾ ವಾಹನವು ಹಳದಿ ಬಣ್ಣದ

ವಾಹನವಾಗಿರುತ್ತದೆ ಮತ್ತು  ಅದು ಯಾವ ಕಂಪನಿಯು ವಾಹನವಾಗಿದೆ ಎಂದು ನನಗೆ ಗೊತ್ತಿಲ್ಲ.  ಮೃತ ಮಗುವಿನ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ.  ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 5479/2023**

**ಚಾಸಾ - 03 / ಪ್ರಾಸಾ - 03**

| | |
|---|---|
| ಹೆಸರು | **ಎಸ್ ನಾರಾಯಣ್** |
| ತಂದೆ ಹೆಸರು | ಹನುಮಯ್ಯ |
| ವಯಸ್ಸು | 52 |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಉದ್ದಂಡಹಳ್ಳಿ |

**ದಿನಾಂಕಃ 23.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಈಗ ಸಾಕ್ಷಿಗೆ ನಿಪಿ-08 ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-02 ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಶಾಲಾವಾಹನಕ್ಕೆ ಮಗುವು ಸಿಲುಕಿ ಮೃತಪಟ್ಟಿರುತ್ತದೆ. ಆ ವಿಷಯಕ್ಕೆ ಸಂಬಂಧಿಸಿದಂತೆ ನಾನು ಸಾಕ್ಷಿಯಾಗಿ ನಿಪಿ-2 ಮತ್ತು 8 ಕ್ಕೆ ಅಪಘಾತ ನಡೆದ ಸ್ಥಳದಲ್ಲಿ 2023 ನೇ ಇಸವಿಯ ಜೂನ್ ತಿಂಗಳಿನಲ್ಲಿ ನನ್ನ ಸಹಿಯನ್ನು ಮಾಡಿರುತ್ತೇನೆ. ನನ್ನ ಜೊತೆ ನಿಪಿ-2 ಮತ್ತು 8 ಕ್ಕೆ ಮಂಜು ಮತ್ತು ಇನ್ನೊಬ್ಬರು ಸಹಿಯನ್ನು ಮಾಡಿದ್ದರು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿನಾಂಕ 08.06.2023 ರಂದು ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪೋಲಿಸರು ನಿಮಗೆ ಮತ್ತು ಪ್ರಾಸಾ 2 ರವರಿಗೆ ನಿಪಿ-8 ರಂತೆ ನೋಟೀಸನ್ನು ನೀಡಿದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅದೇ ದಿನದಂದು ಬೆಳಿಗ್ಗೆ 7.00 ರಿಂದ 8.00 ಗಂಟೆ ಸಮಯದಲ್ಲಿ ಪೋಲಿಸರು ನಿಪಿ-2 ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ , ಪ್ರಾಸಾ 1 ಮತ್ತು 2 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಪಂಚನಾಮೆ ಮಾಡುವ ಸಮಯದಲ್ಲಿ ಪೋಲಿಸರು ಒಂದು ಕಚ್ಚಾ ನಕ್ಷೆಯನ್ನು ತಯಾರು ಮಾಡಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ. ಎಂ.ಎಂ, ವಕೀಲರಿಂದಃ-**

ನನಗೆ ನಿಪಿ-2 ರಲ್ಲಿ ಇರುವ ವಿಷಯದ ಬಗ್ಗೆ ಮಾಹಿತಿ ಇದೆ. ಪಂಚನಾಮೆಗೆ ಸಹಕರಿಸುವಂತೆ ಪೋಲಿಸರು ನನಗೆ ನೋಟೀಸನ್ನು ನೀಡಿದರು. ಪಂಚನಾಮೆಯನ್ನು ಮಧ್ಯಾಹ್ನ 3.30 ರಿಂದ 4.00- 4.30 ರ ವರೆಗೆ ಮಾಡಲಾಗಿರುತ್ತದೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಅಪಘಾತ ಪಡಿಸಿದ ಬಸ್ ಸ್ಥಳದಲ್ಲಿ ಇರಲಿಲ್ಲ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ನನ್ನನ್ನು ಹೊರತು ಪಡಿಸಿ ಪೋಲಿಸರು ಮತ್ತು ಮೃತ ಮಗುವಿನ ತಾಯಿ ಇದ್ದರು. ಪಂಚನಾಮೆ ಮಾಡಿದ ಸ್ಥಳದ ಚೆಕ್ಕುಬಂಧಿ ನನಗೆ ನೆನಪಿಲ್ಲ. ನಿಪಿ-2 ಕ್ಕೆ ನಾನು ಮಾತ್ರ ಸಹಿ ಮಾಡಿರುತ್ತೇನೆ ಮತ್ತು ಬೇರೆಯವರು ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲಿಸರು ಪೋಟೋವನ್ನು ತೆಗೆದಿರುತ್ತಾರೆ. ನಿಪಿ-2 ಮತ್ತು 8 ಕ್ಕೆ ನೀವು ಅಪಘಾತ ನಡೆದ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ ಮತ್ತು ನೀವು ಅದಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೀರ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಮೃತ ಮಗುವಿನ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.** **ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ**